## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.6/2019

ಅ.ಸಾ ಃ 2
ದೋಸಾ ಃ 2

ಸಾಕ್ಷಿದಾರರ ಹೆಸರು ಃ ಅಕ್ಷಯ ವಿಜಾಪುರ

ತಂದೆಯ ಹೆಸರು ಃ ಸುಬ್ಬರಾಯ

ವಯಸ್ಸು ಃ 33 ವರ್ಷ

ಉದ್ಯೋಗ ಃ ಕಿರಿಯ ಸಹಾಯಕರು, ವಾಕರಾರಸ,

ವಾಸ ಸ್ಥಳ ಃ ಹಾವೇರಿ.

ದಿನಾಂಕಃ**21/03/2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

1. ನಾನು ಹಾವೇರಿಯ ವಾಕರಾರಸ ಯಲ್ಲಿ 2013 ರಿಂದ ಇಲ್ಲಿಯವರೆಗೆ ಕಿರಿಯ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ27/2/2018 ರಂದು ಬೆಳಿಗ್ಗೆ 10-00 ಘಂಟೆಗೆ ಕಛೇರಿಯಲ್ಲಿದ್ದೆ. ನಮ್ಮ ಮೇಲಾಧಿಕಾರಿಗಳು ಲೋಕಾಯುಕ್ತ ಕಛೇರಿಗೆ ಪಂಚ ಸಾಕ್ಷಿಯಾಗಬೇಕೆಂತಾ ಹಾಜರಾಗಲು ಸೂಚನೆ ಕೊಟ್ಟರು. ನಾನು ಲೋಕಾಯುಕ್ತ ಕಛೇರಿಗೆ ಬಂದು ಹಾಜರಾದೆ. ಅಲ್ಲಿ ಚಾಸಾ-1 ಮತ್ತು 3 ಹಾಜರಿದ್ದರು. ಚಾಸಾ-27, ಡಿವೈಎಸ್‌ಪಿ ಮತ್ತು ಪೊಲೀಸ್ ಸಿಬ್ಬಂದಿ ಇದ್ದರು. ಚಾಸಾ-27 ನಮಗೆ ಹೇಳಿದ್ದೇನೆಂದರೆ, ಆರೋಪಿ ಖಾತೆ ಬದಲಾವಣೆಗೆ ಹಣ ಕೇಳಿದ್ದಾರೆ. ಅದಕ್ಕಾಗಿ ಚಾಸಾ-1 ದೂರು ಕೊಟ್ಟಿರುತ್ತಾರೆಂತಾ ದೂರನ್ನು ತೋರಿಸಿ ಹೇಳಿದರು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

3. ಚಾಸಾ-1 ಲಂಚದ ಹಣ ಕೊಡಲು ತಯಾರಿಲ್ಲ. ಅದಕ್ಕಾಗಿ ಪಂಚನಾಮೆ ಮಾಡುವುದಿದೆ ಅಂತಾ ಹೇಳಿದರು. ಚಾಸಾ-1 ಮತ್ತು ಆರೋಪಿಯ ಧ್ವನಿ ಇರುವ ಸಂಭಾಷಣೆಯನ್ನು ನಮಗೆ ಕೇಳಿಸಿದರು. ಚಾಸಾ-27 ತನಿಖೆ ರೇಡಿನ ವಿಷಯ ತಿಳಿಸಿದರು. ಸದರಿ ವಿಷಯವನ್ನು ಸಿ.ಡಿ.

ಮಾಡಿ ಕೇಳಿಸಿದರು, ತೋರಿಸಿದರು. ಅದನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ-27 ರವರು ಚಾಸಾ-1 ರವರ ಕೈಯಲ್ಲಿ ಹಣ ಕೊಟ್ಟ ಬಗ್ಗೆ ತಿಳಿಸಿದರು. ಚಾಸಾ-27 ರವರು ಚಾಸಾ-1 ರವರ ಹತ್ತಿರ 500/- ರೂಪಾಯಿ ದರದ 6 ನೋಟುಗಳನ್ನು ಕೊಟ್ಟರು. (ಒಟ್ಟಿಗೆ ರೂ.3,000/- ಹಣ ಕೊಟ್ಟರು.)

4. ಚಾಸಾ-27 ರವರು ನೋಟುಗಳ ಬಗ್ಗೆ ಚೆಕಲಿಸ್ಟ ಮಾಡಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಚೆಕಲಿಸ್ಟ ಮೇಲೆ ಸಹಿ ನೋಡಿ ಗುರುತಿಸುತ್ತಾರೆ. ಚೆಕಲಿಸ್ಟನ್ನು ನಿಪಿ-63, ಸಾಕ್ಷಿ ಸಹಿ ನಿಪಿ-63(ಎ) ಅಂತಾ ಗುರುತಿಸಲಾಯಿತು. ಸದರಿ ನೋಟುಗಳನ್ನು ಒಂದು ಕವರನಲ್ಲಿ ಹಾಕಿ ಇಡಲಾಯಿತು.

5. ಸದರಿ ನೋಟುಗಳಿಗೆ ದ್ರಾವಣವನ್ನು ಸವರಲಾಯಿತು. ಸದರಿ ನೋಟುಗಳನ್ನು ಮುಟ್ಟಿದ ಮೇಲೆ ನನ್ನ ಕೈತೊಳೆಸಿದರು. ಅದು ಪಿಂಕ ಬಣ್ಣದ ದ್ರಾವಣಕ್ಕೆ ಪರಿವರ್ತನೆಯಾಯಿತು. ಸದರಿ ದ್ರಾವಣವನ್ನು ಬಾಟಲನಲ್ಲಿ ಹಾಕಿ ಜಪ್ತಿಮಾಡಿರುತ್ತಾರೆ. ಸದರಿ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮುಮಾ-1 ಅಂತಾ ಗುರುತಿಸಲಾಯಿತು. ಚಾಸಾ-27 ರವರು ಚಾಸಾ-1 ರವರಿಗೆ ವಿಷಯ ತಿಳಿಸಿ, ನೋಟುಗಳನ್ನು ಕವರನಲ್ಲಿ ಹಾಕಿ ಚಾಸಾ-1 ರವರಿಗೆ ಕೊಟ್ಟರು. ಅವರು ಕಿಸೆಯಲ್ಲಿ ಇಟ್ಟುಕೊಂಡರು.

6. ನಾನು, ಚಾಸಾ-1 ಮತ್ತು ಚಾಸಾ-1 ರವರ ತಾಯಿ ಹೊರಟು ಆಟೋದಲ್ಲಿ ಗುತ್ತಲ ರಸ್ತೆಯ ಗ್ರಾಮ ಲೆಕ್ಕಾಧಿಕಾರಿ ಕಛೇರಿಗೆ ಅದೇ ದಿನ ಮಧ್ಯಾಹ್ನ 3-00 ಘಂಟೆಗೆ ಹೋದೆವು. ಅಲ್ಲಿ ಫೋನ್ ಮಾಡಿದಾಗ ಅವರು ಸ್ಥಳದಲ್ಲಿ ಇರಲಿಲ್ಲ. ಫೋನಿನಲ್ಲಿ ಸಂಪರ್ಕ ಆಗಿ ಆರೋಪಿ ಕಛೇರಿ ಯಲ್ಲಿ ಕಾಯಲು ಹೇಳಿದರು. ಅದೇ ದಿನ ಸಂಜೆ 4-00 ಘಂಟೆಗೆ ಆರೋಪಿ ಬಂದಿರುತ್ತಾರೆ. ಚಾಸಾ-1 ಆರೋಪಿಯನ್ನು ಭೇಟಿಯಾದರು. ಚಾಸಾ-1 ರವರು ಆರೋಪಿಯನ್ನು ಭೇಟಿಯಾಗಲು ಕಛೇರಿಯ ಒಳಗಡೆ ಇರುವ ಕೋಣೆಗೆ ಹೋದರು. ನಾನು ಆವಾಗ ನಿಂತು ನೋಡುತ್ತಿದ್ದೆ. ಚಾಸಾ-1 ಕರ್ಚಿಫನಿಂದ ಮುಖ ಒರೆಸಿ ಸಂಜ್ಞೆ ಮಾಡಿರುತ್ತಾರೆ. ನಂತರ ನಾವು ಒಳಗಡೆ ಹೋಗಿ ಆರೋಪಿಗೆ ಕೇಳಿದೆವು. ಚಾಸಾ-1 ರವರು ಒಳಗಡೆ ಹೋಗಿ ಆರೋಪಿ ಜೊತೆಗೆ ಮಾತುಕತೆ ಸಂಭಾಷಣೆ ಆಗಿತ್ತು. ನಾನು ನಿಂತು ನೋಡುತ್ತಿದ್ದೆ. ಚಾಸಾ-1 ಕರ್ಚಿಫನಿಂದ ಮುಖ ಒರೆಸಿ ಸಂಜ್ಞೆ ಮಾಡಿರುತ್ತಾರೆ. ನಾವು ಒಳಗೆ ಹೋಗಿ ಪರೀಕ್ಷಿಸಿದಾಗ ಆರೋಪಿಗೆ ಚಾಸಾ-1 ಕೊಟ್ಟ ಹಣ ಎಲ್ಲಿ ಅಂತಾ ಕೇಳಿದೆವು. ಆರೋಪಿ ಮೊದಲು ಚಾಸಾ-1 ಹಣ ಕೊಟ್ಟಿಲ್ಲ ಅಂತಾ ತಿಳಿಸಿರುತ್ತಾರೆ. ನಾವು ಪುನಃ ಪುನಃ ಆರೋಪಿಯನ್ನು ಕೇಳಿದಾಗ,

ಆರೋಪಿ ನಮಗೆ ಹೇಳಿದ್ದೇನೆಂದರೆ, ಫೈಲು, ಟೇಬಲ್ ಇತ್ತು. ನಾವು ಆರೋಪಿಗೆ ಚಾಸಾ-1 ಕೊಟ್ಟ ಹಣ ಮತ್ತು ವಸ್ತುಗಳನ್ನು ಕೇಳಿದೆವು. ಚಾಸಾ-1 ರವರು 1 ನೇ ಆರೋಪಿಗೆ ಇದೇ ಹಣ ಕೊಟ್ಟಿದ್ದೇನೆ ಅಂತಾ ಹೇಳಿದ.

7. ಲೋಕಾಯುಕ್ತ ಪೊಲೀಸರು ಮತ್ತು ಸಿಬ್ಬಂದಿ ಬಂದು ಆರೋಪಿಯ ಕೈಯನ್ನು ನೀರಿನಿಂದ ತೊಳೆಸಿದರು. ಆಗ ನೀರು ಪಿಂಕ ಬಣ್ಣಕ್ಕೆ ಬದಲಾವಣೆಯಾಯಿತು. ಸದರಿ ಬದಲಾವಣೆ ಗೊಂಡ ದ್ರಾವಣವನ್ನು ಬಾಟಲನಲ್ಲಿ ಹಾಕಿ ಜಪ್ತಿಮಾಡಿರುತ್ತಾರೆ. ಸದರಿ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮುಮಾ-2 ಅಂತಾ ಗುರುತಿಸಲಾಯಿತು. ಆರೋಪಿಯ ಜೇಬುಗಳನ್ನು ಚೆಕ್ ಮಾಡಿದೆವು. ಅವನ ಗುರುತಿನ ಚೀಟಿ, ಕಾರ್ಡಗಳು ಮತ್ತು ದಾಖಲೆಗಳು ಇದ್ದವು. ಲೋಕಾಯುಕ್ತ ಸಿಬ್ಬಂದಿಯವರು ಚೆಕಲಿಸ್ಟ ಕೂಡ ತಯಾರಿಸಿರುತ್ತಾರೆ. ಚಾಸಾ-27 ನನಗೆ ಕೇಳಿದ್ದೇನೆಂದರೆ, ಜಪ್ತುಮಾಡಿದ ನೋಟುಗಳು ಆರೋಪಿ ಕಡೆಯಿಂದ ಇವೆ ಇದ್ದವಾ ಅಂತಾ ಕೇಳಿರುತ್ತಾರೆ. ನಾನು ಚೆಕಲಿಸ್ಟಗಳಲ್ಲಿ ನಮೂದಿಸಿದ ನೋಟುಗಳಿಗೂ ಮತ್ತು ಜಪ್ತಿಮಾಡಿದ ನೋಟುಗಳಿಗೆ ಹೊಂದಾಣಿಕೆ ಯಾಯಿತು. ಪಂಚನಾಮೆಯ ನಡಾವಳಿಗಳನ್ನು ಪೋಟೋ ತೆಗೆಯಾಯಿತು.

8. ಚಾಸಾ-27 ರವರು ದಾಖಲೆಗಳಿಗೆ ಸಹಿ ಪಡೆದಿರುತ್ತಾರೆ. ಸಾಕ್ಷಿ ನಿಪಿ-3 ಟ್ರ್ಯಾಪ್ ಪಂಚನಾಮೆಗೆ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿ ಸಹಿ ನಿಪಿ-3(ಬಿ) ಅಂತಾ ಗುರುತಿಸಲಾಯಿತು. ಚಾಸಾ-12 ತಹಶೀಲ್ದಾರರವರನ್ನು ಕರೆಸಿ, ಧ್ವನಿಮುದ್ರಣದ ಬಗ್ಗೆ ಪಂಚನಾಮೆ ಮಾಡಿರುತ್ತಾರೆ. ಚಾಸಾ-3 ಕೂಡ ಹಾಜರಿದ್ದರು. ಆರೋಪಿ ಹತ್ತಿರ ಇರುವ ದುಡ್ಡು ಮತ್ತು ಇತರೇ ವಸ್ತುಗಳನ್ನು ಜಪ್ತಿ ಮಾಡಿರುತ್ತಾರೆ. ನೋಟುಗಳನ್ನು ಪೊಲೀಸರು ಜಪ್ತಿಮಾಡಿರುತ್ತಾರೆ. ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ. ಜಪ್ತುಮಾಡಿದ ನೋಟುಗಳನ್ನು ಮತ್ತು ದಾಖಲೆಗಳನ್ನು ಪೊಲೀಸರು ಜಪ್ತಿಮಾಡಿ ಪಂಚನಾಮೆ ಮಾಡಿರುತ್ತಾರೆ. ಅದಕ್ಕೂ ಕೂಡ ಸಹಿ ಮಾಡಿರುತ್ತೇನೆ. ನಿಪಿ-32 ರಿಂದ ನಿಪಿ-53 ರ ಬಣ್ಣದ ಪೋಟೋಗಳಲ್ಲಿ ತನ್ನ ಮತ್ತು ಇತರರ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ವಿರಾಮದ ಅವಧಿಯಾಗಿದ್ದರಿಂದ, ಹೆಚ್ಚಿನ ಮುಖ್ಯ ವಿಚಾರಣೆಯನ್ನು 2 ನೇ ಹಂತದವರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.

ದಿನಾಂಕ:**21/03/2024** ರಂದು **2** ನೇ ಹಂತದಲ್ಲಿ ಸಾಕ್ಷಿ ಅಸಾ-**2** ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

(ತನಿಖಾಧಿಕಾರಿ ಸೀಲು ಮಾಡಿದ ಸಿ.ಡಿ.ಯನ್ನು ಹಾಜರುಪಡಿಸಿದ್ದು, ಮಾನ್ಯ ಪ್ರಾವಿಸಅ ಮತ್ತು ಆರೋಪಿ ಪರ ವಕೀಲರಾದ ಶ್ರೀ ಎಸ್.ಎನ್.ಎಚ್. ಸಮಕ್ಷಮ ತೆಗೆದು ಗುರುತಿಸಲಾಯಿತು.)

9. ಸಿ.ಡಿ.ಯನ್ನು ಲ್ಯಾಪಟ್ಯಾಪ ಮುಖಾಂತರ ಪ್ಲೇ ಮಾಡಿ ನೋಡಿದಾಗ, ಸಾಕ್ಷಿ ಚಾಸಾ-1 ಮತ್ತು ಆರೋಪಿಯ ಧ್ವನಿ ಮುದ್ರಣದ ಸಂಭಾಷಣೆಯನ್ನು ಕೇಳಿ ಗುರುತಿಸಿರುತ್ತಾರೆ. ಸದರಿ ಸಿ.ಡಿ.ಯನ್ನು ನಿಪಿ-64 ಅಂತಾ ಗುರುತಿಸಲಾಯಿತು.

10. ನಿಪಿ-3 ಕ್ಕೆ ಸಾಕ್ಷಿ ಸಹಿ ನಿಪಿ-3(ಬಿ) ಅಂತಾ ಈಗಾಗಲೇ ಗುರುತಿಸಲಾಗಿದೆ.

(ತನಿಖಾಧಿಕಾರಿ ಈ ದಿವಸ ಸೀಲು ಮಾಡಿದ ಕವರನ್ನು ಹಾಜರುಪಡಿಸಿದ್ದು, ಮಾನ್ಯ ಪ್ರಾವಿಸಅ ಮತ್ತು ಆರೋಪಿ ಪರ ವಕೀಲರಾದ ಶ್ರೀ ಎಸ್.ಎನ್.ಎಚ್. ಸಮಕ್ಷಮ ತೆಗೆದು ಗುರುತಿಸಲಾಯಿತು.)

9. ಸದರಿ ಕವರನಲ್ಲಿ 500/- ರೂಪಾಯಿ ದರದ 6 ನೋಟುಗಳು (ಒಟ್ಟು ರೂ.3,000/-) ಇದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಹಣವನ್ನು ಮುಮಾ-3 ಅಂತಾ ಒಟ್ಟಿಗೆ ಗುರುತಿಸಲಾಯಿತು. ಮುಮಾ-3 ಹಣದ ನೋಟುಗಳ ನಂಬರ ಮತ್ತು ವಿವರ, ನಿಪಿ-63 ರಲ್ಲಿ ನಮೂದಿಸಲಾಗಿದೆ. ತನಿಖಾಧಿಕಾರಿ ಎಲ್ಲಾ ದಾಖಲೆಗಳನ್ನು ತಯಾರಿ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಆರೋಪಿಯನ್ನು ಮಾನ್ಯ ಕೋರ್ಟಿಗೆ ಹಾಜರುಪಡಿಸುತ್ತೇವೆ ಅಂತಾ ಹೇಳಿರುತ್ತಾರೆ. ಮತ್ತೆ ಈ ಕೇಸಿನ ವಿಚಾರದಲ್ಲಿ ಹೇಳುವುದು ಏನೂ ಇರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ನೀಡಿರುವ ಹೇಳಿಕೆ ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಅವು ಪರಸ್ಪರ ವ್ಯತಿರಿಕ್ತವಾಗಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿದ್ದು ಮತ್ತು ಈ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಸರ್ಕಾರಿ ಅಭಿಯೋಜಕರು ಕೋರಿದ್ದರಿಂದ ಅನುಮತಿಸಲಾಗಿದೆ.)

**ಪಾಟೀ ಸವಾಲುಃ ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

10. ತನಿಖಾಧಿಕಾರಿ ದಿನಾಂಕ:27/2/2018 ರಂದು ಮಧ್ಯಾಹ್ನ 1-15 ರಿಂದ 2-45 ರವರೆಗೆ ನಿಪಿ-2 ರಂತೆ ವಹಿಸುವಿಕೆ ಪಂಚನಾಮೆ ಮಾಡಿ, ಓದಿ ತಿಳಿದು ನನ್ನ ಸಹಿ ಪಡೆದಿರುತ್ತಾರೆ ಎಂದು ಸೂಚಿಸುವುದು ನಿಜ. ನಿಪಿ-2 ಕ್ಕೆ ಸಾಕ್ಷಿ ಸಹಿ ನಿಪಿ-2(ಬಿ) ಅಂತಾ ಗುರುತಿಸಲಾಯಿತು. ನಾನೇ ನೋಟುಗಳಿಗೆ ಫಿನಫ್ತಲಿನ್ ಪೌಡರನ್ನು ಸವರಿರುತ್ತೇನೆ ಎಂದು ಸೂಚಿಸುವುದು ನಿಜ. ತನಿಖಾಧಿಕಾರಿ

ದ್ರಾವಣವನ್ನು ಜಪ್ತಿಮಾಡಿರುತ್ತಾರೆ ಎಂದು ಸೂಚಿಸುವುದು ನಿಜ. ನಿಪಿ-2 ಆಗುವುದಕ್ಕಿಂತ ಮುಂಚೆ ನನಗೆ ಚಾಸಾ-1 ರವರ ಅಂಗಶೋಧನೆ ಮಾಡಲು ಸೂಚಿಸಿದ್ದರು ಎಂದರೆ ನಿಜ. ಚಾಸಾ-1 ರವರ ಹತ್ತಿರ ರೂ.70/- ಮತ್ತು ರೂ.200/- ನೋಟುಗಳು, ಕಾರ್ಡಗಳು, ಆಧಾರ ಕಾರ್ಡ, ರೆಡಮೀ ಮೊಬೈಲ್ ಪೋನ್, ಕರ್ಚಿಫ ಅವರಲ್ಲಿ ಇತ್ತು ಎಂದು ಸೂಚಿಸುವುದು ನಿಜ.

11. ನಿಪಿ-2 ಆಗುವಾಗ, ನಿಪಿ-4 ರಿಂದ ನಿಪಿ-31 ಪೋಟೋಗಳನ್ನು ತೆಗೆದರು ಎಂದು ಸೂಚಿಸುವುದು ನಿಜ. ಆರೋಪಿ ಬಲಗೈ ತೊಳೆಸಿದಾಗ, ದ್ರಾವಣ ಪಿಂಕ್ ಬಣ್ಣಕ್ಕೆ ಬದಲಾಯಿತು ಮತ್ತು ಆ ದ್ರಾವಣವನ್ನು ಬಾಟಲನಲ್ಲಿ ಶೇಖರಿಸಿ ಜಪ್ತಿಪಡಿಸಿಕೊಳ್ಳಲಾಯಿತು ಎಂದು ಸೂಚಿಸುವುದು ನಿಜ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಮುಮಾ-4 ಅಂತಾ ಗುರುತಿಸಲಾಯಿತು. ದ್ರಾವಣವನ್ನು ತೆಗೆದು ಸ್ಯಾಂಪಲ್ ತೆಗೆದ ಬಗ್ಗೆ ಬಾಟಲನಲ್ಲಿ ಶೇಖರಿಸಿ ಜಪ್ತಿಪಡಿಸಿಕೊಳ್ಳಲಾಯಿತು ಎಂದು ಸೂಚಿಸುವುದು ನಿಜ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಮುಮಾ-5 ಅಂತಾ ಗುರುತಿಸಲಾಯಿತು. ಚಾಸಾ-11 ಮತ್ತು 12 ರವರ ಸಮಕ್ಷಮ ಧ್ವನಿ ಮುದ್ರಣದ ಸಂಭಾಷಣೆಯ ಗುರುತಿಸುವಿಕೆಯನ್ನು ನನ್ನ ಮುಂದೆ ಮಾಡಿರುತ್ತಾರೆ.

12. ಪೊಲೀಸರಿಗೆ ಘಟನೆ ಬಗ್ಗೆ ಹೇಳಿಕೆ ಕೊಟ್ಟೆ ಎಂದು ಸೂಚಿಸುವುದು ನಿಜ. ಕಿರಿಯ ಅಭಿಯಂತರರು, ಪಿಡಬ್ಲೂಡಿಯವರು ನಾನು ತೋರಿಸಿದ ಜಾಗೆಯಲ್ಲಿ ನಕಾಶೆ ತಯಾರಿಸಿದರು ಎಂದು ಸೂಚಿಸುವುದು ನಿಜ. ಚಾಸಾ-14 ಕೃತ್ಯ ಜಾಗೆಯ ದಾಖಲೆಯನ್ನು ನಮ್ಮ ಸಮಕ್ಷಮ ಕೊಟ್ಟರು ಎಂದು ಸೂಚಿಸುವುದು ನಿಜ.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್.ಎನ್.ಎಚ್. ವಕೀಲರಿಂದಃ-**

(ಶ್ರೀ ಎಸ್.ಎನ್.ಎಚ್. ಪಾಟೀ ಸವಾಲು ಮಾಡಲು ತಯಾರಿರುವುದಿಲ್ಲ ಮತ್ತು ಶ್ರೀ ಎಂ.ಸಿ.ಎಚ್. ರವರು ಜ್ವರದಿಂದ ಬಳಲುತ್ತಿದ್ದಾರೆಂತಾ ಮನವಿ ಮಾಡಿ, ವೇಳೆ ಕೋರಿರುತ್ತಾರೆ. ನ್ಯಾಯದಾನದ ದೃಷ್ಟಿಯಿಂದ ಪಾಟೀ ಸವಾಲಿಗೆ ವೇಳೆ ಕೊಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.